ಕಂನಾಡಿಗಾ ನಾರಾಯಣ



# ಅಂತಿಮ ದರ್ಶನ

ನಿರಂಜನನಿಗೆ ಆತನ ಅವ್ವ ಸತ್ತ ಸುದ್ದಿ ತಿಳಿದಿದ್ದೇ ಆಕೆ ಸತ್ತ ಇಪ್ಪತ್ತನಾಲ್ಕು ಗಂಟೆಗಳ ನಂತರ. ಹಳ್ಳಿಯ ಜನಕ್ಕೆ ಆತನಿಗೆ ವಿಷಯ ತಿಳಿಸುವುದು ಹೇಗೆಂದೇ ತಿಳಿದಿರಲಿಲ್ಲ. ಅವನ ಬಳಿಯಿದ್ದ ಮೊಬೈಲ್ ನಂಬರ್ ಅಂತರರಾಷ್ಟ್ರೀಯ ಸಂಪರ್ಕ ಹೊಂದಿರದೇ ಇಂಡಿಯಾದಲ್ಲೇ ಕುಯ್‌ಗುಡುತ್ತಿತ್ತು. ಅಲ್ಲಿ ಆತ ಪಡೆದಿದ್ದ ತಾತ್ಕಾಲಿಕ ನಂಬರ್ರು ಇಲ್ಲಿನ ಯಾರಿಗೂ ತಿಳಿದಿರಲಿಲ್ಲ. ಆತನ ಅಣ್ಣನಿಗೆ ಮೊಬೈಲ್ ಕರೆ ಬಂದಾಗ – ಪಂಪ್‌ಸೆಟ್ಟಿನ ಬಟನ್‌ನಂತೆ – ಹಸಿರು ಬಟನ್ ಒತ್ತಬೇಕು, ಆಫ್ ಮಾಡಲು ಕೆಂಪು ಬಟನ್ ಒತ್ತಬೇಕು ಎಂಬುದಷ್ಟೇ ತಿಳಿದಿದ್ದದ್ದು. ಬೇಸಾಯ ಮಾಡಿಕೊಂಡಿದ್ದ ನರಸಯ್ಯ ತಮ್ಮನಿಗೆ ಓದೋಕ್ಕೆ ಫಾರಿನ್‌ಗೆ ಕಳಿಸೋದು ಬ್ಯಾಡ ಎಂದು ಪಟ್ಟು ಹಿಡಿದಿದ್ದರೂ ಇದೇ ಅವ್ವನೇ ಹಟ ಹಿಡಿದು ಕಳಿಸಿದ್ದಳು. 'ತಂದೆ ಕಳಕೊಂಡ ತಬ್ಬಲಿ ಮಗ. ಪಾಪ, ಏನೋ ಓದಬೇಕು ಅಂಥ ಆಸೆ ಪಡತೈತೆ... ಅದೆಷ್ಟಾದರೂ ಖರ್ಚಾಗಲಿ, ನಾನು ಕೋಳಿಮೊಟ್ಟೆ ಮಾರಿ ಕೂಡಿಟ್ಟ ದುಡ್ಡನ್ನೆಲ್ಲ ಕೊಡ್ತೀನಿ, ನೀನು ಓದು ಮಗಾ...' ಎಂದು ಬೆಂಬಲಕ್ಕೆ ನಿಂತಿದ್ದಳು. ಅವ್ವ ಭಾಗ್ಯವ್ವ ಸಾಯುವಾಗ 'ಮಗಾ... ಮಗಾ...' ಎಂದು ಹಂಬಲಿಸಿ ಹಂಬಲಿಸಿ ಸತ್ತಿದ್ದಳು. ಆದರೆ ಆ ಕೂಗು ಅಮೆರಿಕದಲ್ಲಿ ಓದುತ್ತಿದ್ದ ಮಗನಿಗೆ ತಲುಪಿರಲಿಲ್ಲ.

ನಿರಂಜನನಿಗೆ ವಿಷಯ ತಿಳಿಸಲು ಫೋನ್ ನಂಬರ್ರು, ವಾಟ್ಸ್ಆ್ಯಪ್ ಯಾವುದೂ ಇಲ್ಲವೆಂದು ತಿಳಿದಾದ ಮೇಲೆ ಅವನ ಫ್ರೆಂಡ್ಸ್ ಗ್ರೂಪಿನಲ್ಲಿದ್ದ ಫೇಸ್‌ಬುಕ್ ಗೆಳೆಯನನ್ನು ಹುಡುಕಿ, ಅವನ ಮೂಲಕ ಅವನ ತಾಯಿಯ ಫೋಟೊ ಹಾಕಿಸಿ, ಶ್ರದ್ಧಾಂಜಲಿ ಸಲ್ಲಿಸಿ ಪೋಸ್ಟ್ ಮಾಡಿಸಲಾಗಿತ್ತು. ಫೇಸ್‌ಬುಕ್ ಅನ್ನೂ ನಿರಂತರವಾಗಿ ನೋಡದೆ, ಬರೀ ಕಾಲೇಜು, ಲೈಬ್ರರಿ ಎಂದು ಓದಿಕೊಂಡಿದ್ದ ನಿರಂಜನ, ಅವತ್ತು ಲೈಬ್ರರಿಯಲ್ಲಿ ಕುಳಿತು ಗೂಗಲ್‌ನಲ್ಲಿ ಏನನ್ನೋ ಹುಡುಕಲು ಬ್ರೌಸ್ ಮಾಡುತ್ತಿದ್ದವನು ಅಕಸ್ಮಾತ್ತಾಗಿ ಫೇಸ್‌ಬುಕ್ ತೆರೆದಿದ್ದ. ಅದನ್ನು ಕಂಡವನೇ ಹೌಹಾರಿ ಹೋಗಿ, ಕೂಡಲೇ ಹೊರಗೆ ಓಡಿಬಂದು, ಅಣ್ಣನಿಗೆ ಫೋನ್ ಮಾಡಿ ಏನಾಯಿತು, ಎಂತಾಯಿತು ಎಂದೆಲ್ಲ ಗಾಬರಿಯಿಂದ ಕೇಳಿದ. ಆದರೆ ನರಸಯ್ಯನಿಗೆ ಅವಕ್ಕೆಲ್ಲ ಉತ್ತರಿಸಲು ಬಾಯಿ ಬರದೇ, 'ಅವ್ವ ವಿಷ ಏರಿ ಸತ್ತಳು' ಎಂದಷ್ಟೇ ಹೇಳಿದ. ಅದೂ ಆ ಹಳ್ಳಿಯಲ್ಲಿ ಸಿಗ್ನಲ್ ಸಿಗದೇ ಅಸ್ಪಷ್ಟವಾಗಿ ಕೇಳಿಸಿದ್ದರಿಂದ ಹಾವು ಕಡಿದು ಸತ್ತಳೋ, ವಿಷ ಕುಡಿದು ಸತ್ತಳೋ ಎಂಬುದು ಸ್ಪಷ್ಟವಾಗಲಿಲ್ಲ. ತಾನು ಈಗಲೇ ಹೊರಟು ಬರುತ್ತೇನೆ ಎಂದು ಹೇಳಿದ್ದಷ್ಟೇ ಕೇಳಿಸಿ, ನೆರೆದಿದ್ದ ಎಲ್ಲರಿಗೂ 'ಹೊರಟಿದ್ದಾನೆ, ಬರುತ್ತಿದ್ದಾನೆ...' ಎಂದಷ್ಟೇ ಹೇಳಿದ. ಅವನು ಬರುವುದು ಯಾವಾಗ, ಅಲ್ಲಿಯವರೆಗೆ ಹೆಣದ ರಕ್ಷಣೆ ಮಾಡುವುದು ಹೇಗೆ ಎಂಬುದು ಹಳ್ಳಿಯ ಆ ಜನಗಳಿಗೆ ತಿಳಿದಿರಲಿಲ್ಲ. ಅವನು ಬರುವ ಮುನ್ನವೇ ಮಣ್ಣು